‘ಅದನ್ನು ನಿನ್ನ ಬಲಗೈಲ್ಲಿ ಹಿಡಿದುಕೊಂಡು, ಕೈಯನ್ನು ಮೇಲಕ್ಕೆತ್ತಿ ನಿನಗೆ ಬೇಕಾದ ವರವನ್ನು ಕೇಳು. ಆದರೆ, ಮತ್ತೊಮ್ಮೆ ಎಚ್ಚರಿಸುತ್ತಿದ್ದೇನೆ ವೈಟ್... ಇದರಿಂದ ಉಂಟಾಗುವ ರಗಳೆಗಳ ಬಗ್ಗೆ ನಾನು ಮೊದಲೇ ಹೇಳಲಿಲ್ಲವೆನ್ನುವುದು ಬೇಡ.’

‘ನೀವು ಹೇಳುತ್ತಿರುವುದು ‘ಅರೇಬಿಯನ್ ನೈಟ್ಸ್’ ಕತೆಗಳ ಥರ ಕೇಳಿಸುತ್ತಿದೆ ಮೇಜರ್ ಸಾಹೇಬ್ರೆ!’ ಎನ್ನುತ್ತಾ ಮಿಸೆಸ್ ವೈಟ್ ಊಟ ತಯಾರು ಮಾಡಲು ಎದ್ದು ಹೊರಡುತ್ತಾ, ‘ನನ್ನ ಸಹಾಯಕ್ಕಾಗಿ ಮತ್ತೊಂದು ಜೊತೆ ಕೈಗಳನ್ನು ಕೇಳಿ ಮಾರಾಯ್ರೆ!’ ಎಂದಳು ಗಂಡನನ್ನು ಉದ್ದೇಶಿಸಿ.

ಮಿಸ್ಟರ್ ವೈಟ್ ಕೋತಿಯ ಪಂಜವನ್ನು ಬಲಗೈಯಲ್ಲಿ ಹಿಡಿದು ಮೇಲಕ್ಕೆತ್ತಿದ. ಮೇಜರನೊಬ್ಬನನ್ನು ಬಿಟ್ಟು ಎಲ್ಲರೂ ನಗತೊಡಗಿದರು. ಮೇಜರ್ ಮೊರಿಸ್ ಗಂಭೀರವಾಗಿ ಮಿಸ್ಟರ್ ವೈಟನ ಕೈಯನ್ನು ಹಿಡಿದುಕೊಂಡರು.

‘ತಮಾಷೆ ಮಾಡಬೇಡ ವೈಟ್. ನಿನಗೆ ಏನಾದ್ರು ಪಡೆದುಕೊಳ್ಳುವುದೇ ಇದ್ದಲ್ಲಿ ಗಂಭೀರವಾಗಿ ಕೇಳಿಕೊ.’

ಮಿಸ್ಟರ್ ವೈಟ್ ಕೋತಿಯ ಪಂಜವನ್ನು ತಮ್ಮ ಜೇಬಿಗಿಳಿಸಿದರು. ಮೇಜಿನ ಮೇಲೆ ಊಟ ತಯಾರಾಗಿತ್ತು. ಮಿಸ್ಟರ್ ವೈಟ್ ಗೆಳೆಯನನ್ನು ಊಟಕ್ಕೆ ಎಬ್ಬಿಸಿದ. ತತ್ಕಾಲಕ್ಕೆ ಅವರು ಕೋತಿಯ ಪಂಜವನ್ನು ಮರೆತು ಮೇಜರ್ ಮೊರಿಸರ ಭಾರತದ ಅನುಭವಗಳನ್ನು ಕುತೂಹಲದಿಂದ ಕೇಳಿದರು.

ಊಟ ಮುಗಿದು, ಮೇಜರ್ ಮೊರಿಸನನ್ನು ಕಳುಹಿಸಿದ ಮೇಲೆ ಮಿಸೆಸ್ ವೈಟ್ ಹೇಳಿದಳು, ‘ಕೋತಿಯ ಪಂಜ ಮತ್ತು ಮೇಜರ್ ಮೊರಿಸನ ಸಾಹಸ ಕತೆಗಳು – ಇವುಗಳಲ್ಲಿ ಯಾವುದು ರೋಚಕವೆಂದು ತೀರ್ಮಾನಿಸುವುದು ನನಗೆ ಗೊತ್ತಾಗುತ್ತಿಲ್ಲ.’

‘ಡ್ಯಾಡ್, ನಾವು ಶ್ರೀಮಂತರಾಗಬಹುದು ಅಲ್ವೇ?’ ಎಂದ ಹರ್ಬರ್ಟ್ ಹುರುಪಿನಿಂದ.

ಮಿಸ್ಟರ್ ವೈಟ್ ಮತ್ತೊಮ್ಮೆ ಪಂಜವನ್ನು ಹೊರತೆಗೆದು ದೀಪದ ಬೆಳಕಿನಲ್ಲಿ ಪರೀಕ್ಷಿಸತೊಡಗಿದ.

‘ಏನು ಕೇಳಿಕೊಳ್ಳುವುದೆಂದೇ ನನಗೆ ಅರ್ಥವಾಗುತ್ತಿಲ್ಲ...’ ಎಂದ ಮಿಸ್ಟರ್ ವೈಟ್ ಅಸಹಾಯಕತೆಯಿಂದ. ‘ನಮ್ಮ ಬಳಿ ಎಲ್ಲವೂ ಇದೆ!... ಇದು ನಿಜ ಕೂಡ.’

‘ಡ್ಯಾಡಿ, ಮನೆಯ ಮೇಲಿನ ಸಾಲ ತೀರಿದರೆ ನಮ್ಮ ಎಲ್ಲಾ ಸಂಕಷ್ಟಗಳೂ ಪರಿಹಾರವಾದಂತೆಯೇ... ಅಲ್ವೇ? ಒಂದು ಇನ್ನೂರು ಪೌಂಡುಗಳನ್ನು ಕೇಳಿ ನೋಡೋಣ?’ ತಂದೆಯ ಹೆಗಲ ಮೇಲೆ ಕೈಯನ್ನಿಡುತ್ತಾ ಹೇಳಿದ ಹರ್ಬರ್ಟ್.

ಮಿಸ್ಟರ್ ವೈಟನ ಮುಖ, ಹೇಸಿಗೆಯನ್ನು ಮುಟ್ಟಿಸಿಕೊಂಡವನಂತೆ ಮುರುಟಿಕೊಂಡಿತು. ಇದನ್ನು ನೋಡಲಾಗದ ಹರ್ಬರ್ಟ್ ಅಲ್ಲಿಂದ ಪಿಯಾನೊ ಬಳಿ ಹೋಗಿ ಬೆರಳಾಡಿಸತೊಡಗಿದ.

‘ನಾನು ಇನ್ನೂರು ಪೌಂಡುಗಳ ಕೋರಿಕೆಯನ್ನಿಡುತ್ತಿದ್ದೇನೆ.’ ಮಿಸ್ಟರ್ ವೈಟ್ ಹೇಳತೊಡಗಿದ. ಅವನ ದನಿ ಉಡುಗಿತ್ತು ಮತ್ತು ಕಂಪಿಸುತ್ತಿತ್ತು.

ಆ ಕ್ಷಣದಲ್ಲೇ ಮಿಸ್ಟರ್ ವೈಟನ ಬಾಯಿಂದ ಒಂದು ಚೀತ್ಕಾರ ಹೊರಟಿತು. ಅಡುಗೆ ಮನೆಯಿಂದ ಮಿಸೆಸ್ ವೈಟ್ ದೌಡಾಯಿಸಿ ಹಜಾರಕ್ಕೆ ಓಡಿಬಂದಳು.

‘ಅದು ಮಿಸುಕಾಡಿತು!’ ಅವನ ಮುಖ ಬಿಳುಚಿಕೊಂಡಿತ್ತು ಮತ್ತು ಕೋತಿಯ ಪಂಜ ನೆಲದ ಮೇಲೆ ಬಿದ್ದುಕೊಂಡಿತ್ತು. ಅದರ ಕಡೆಗೆ ಬೆರಳು ತೋರಿಸುತ್ತಾ ಅವನು ಹೇಳಿದ: ‘ನಾನು ನನ್ನ